# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/439/12-13

ದಿನಾಂಕ :14-10-2016

ಉಪಸ್ಥಿತರು: **ಶ್ರೀ ಲೋಕೇಶ್ ಪಿ.ಎನ್** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀ ಜೆ ಹನುಮಂತ ರೆಡ್ಡಿ ತಂದೆ ಪಿ. ಪೋಲಾ ರೆಡ್ಡಿ,<br>2ನೇ ಕ್ರಾಸ್, ನೆಹರೂ ಕಾಲೋನಿ, ಬಳ್ಳಾರಿ<br><br>(ಶ್ರೀ ಬಿ. ಪರ್ವತ ರೆಡ್ಡಿ, ವಕೀಲರು, ಬಳ್ಳಾರಿ) | (1) ತಹಶೀಲ್ದಾರರು, ಬಳ್ಳಾರಿ<br>(2) ಕಂದಾಯ ನಿರೀಕ್ಷಕರು, ಬಳ್ಳಾರಿ<br>(3) ಗ್ರಾಮಲೆಕ್ಕಾಧಿಕಾರಿಗಳು, ಕೊಳಗಲ್ಲು |

ದಾವಾ ಜಮೀನಿನ ವಿವರ :-

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ಕೊಳಗಲ್ಲು | 624/ಎ/ಬಿ1/ಎ | 0.02.75 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು, ಬಳ್ಳಾರಿ ಇವರ ಎಂ ಆರ್ ನಂ 850/04-05 ದಿನಾಂಕ 16/07/2006 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 25-06-2016, 30-10-2015, 20-05-2016, ಮತ್ತು 14-10-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳ ಪರ ವಕೀಲರು ದಿನಾಂಕ: 14-10-2016 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿ, ಬಳ್ಳಾರಿ ತಾಲ್ಲೂಕಿನ ಕೊಳಗಲ್ಲು ಗ್ರಾಮದ ಸ.ನಂ 624/ಎ/ಬಿ1/ಎ ವಿಸ್ತೀರ್ಣ: 0.02.75 ಎಕರೆ ಜಮೀನಿನನ್ನು ವಾದಿಗಳು ಡಿ.ಪ್ರಭಾರೆಡ್ಡಿ ತಂದೆ ಭೀಮಾರೆಡ್ಡಿ ಇವರಿಂದ ನೊಂದಾಯಿತ ಕ್ರಯ ಸಂಖ್ಯೆ 643/2005-06 ದಿನಾಂಕ 21-04-2005 ರನ್ವಯ ಖರೀದಿಸಿದ್ದು, ಕಂದಾಯ ನಿರೀಕ್ಷಕರು, ಬಳ್ಳಾರಿ ಇವರ ಎಂ ಆರ್ ನಂ 850/04-05 ದಿನಾಂಕ 16/07/2006 ನ್ನು ರದ್ದುಗೊಳಿಸಿ ಪಹಣಿಯಲ್ಲಿ ಹಕ್ಕುದಾಖಲಿಸಿಕೊಡುವಂತೆ ಕೋರಿರುತ್ತಾರೆ.

ಮುಂದುವರೆದು ಪ್ರಕರಣವನ್ನು ಪರಿಶೀಲಿಸಲಾಗಿ ಕಂದಾಯ ನಿರೀಕ್ಷಕರು ಸದರಿ ಹಕ್ಕುಬದಲಾವಣೆಯನ್ನು ಸಕಾರಣವಾಗಿಯೆ ತಿರಸ್ಕರಿಸಿದ್ದು, ಸದರಿ ಜಮೀನಿನ ಮಾರಾಟದಲ್ಲಿ ಕರ್ನಾಟಕ ಭೂಕಂದಾಯ ಕಾಯ್ದೆ ಕಲಂ 95 ರ ಉಲ್ಲಂಘನೆಯು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಕಾರಣ ಸದರಿ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿಂತೆ ಈ ಕೆಳಕಂಡ ಆದೇಶ.